


# ಮೈಸೂರು ಝೂ ಸಾರಥಿ ಅನುಷಾ

■ ಎಂ. ಮಹೇಶ್

ವೈದ್ಯರು – ಎಂಜಿನಿಯರ್ ಆಗಬೇಕು ಎಂದು ಬಯಸುವ ಯುವಕರು, ಯುವತಿಯರ ಸಂಖ್ಯೆಯೇ ಹೆಚ್ಚಾಗಿದ್ದ ಕಾಲಘಟ್ಟವದು. ಆ 'ಟ್ರೆಂಡ್' ನಡುವೆ ವಿಭಿನ್ನವಾಗಿ ಯೋಚಿಸಿದ ಆ ಯುವತಿ ಅರಣ್ಯ ಕೋರ್ಸ್ ವ್ಯಾಸಂಗದ ನಿರ್ಧಾರಕ್ಕೆ ಬಂದರು. ಶಿರಸಿಯ ಅರಣ್ಯ ಕಾಲೇಜಿನಲ್ಲಿ ಬಿ.ಎಸ್‌ಸಿ. ಫಾರೆಸ್ಟ್ರಿ ಕೋರ್ಸ್ ಸೇರಿದರು. ಪರಿಸರದ ಒಲವು ಇತರ ಕೋರ್ಸ್‌ಗಳ ಆಸಕ್ತಿ ಮೂಡಿಸಲಿಲ್ಲ. ಅವರು ಹಾಕಿದ ಆ 'ಹೆಜ್ಜೆ', ಅವರನ್ನು ಅರಣ್ಯ ಇಲಾಖೆಯ ಅಧಿಕಾರಿಯ ಸ್ಥಾನಕ್ಕೆ ತಂದು ಕೂರಿಸಿದೆ.

ಅವರೇ ಅನುಷಾ ಪಿ. ಸದ್ಯ ಮೈಸೂರಿನಲ್ಲಿ ವಿಶ್ವವಿಖ್ಯಾತ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ (ಇಡಿ)ಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

1892ರಲ್ಲಿ ಸ್ಥಾಪಿಸಲಾದ ದೇಶದ ಹಳೆಯ ಮತ್ತು ಅತಿ ದೊಡ್ಡ ಮೃಗಾಲಯಗಳಲ್ಲಿ ಒಂದಾಗಿರುವ ಈ 'ಆಲಯ'ವೀಗ 168ಕ್ಕೂ ಹೆಚ್ಚು ಪ್ರಭೇದಗಳ 1,450ಕ್ಕೂ ಹೆಚ್ಚು ಪ್ರಾಣಿ–ಪಕ್ಷಿಗಳಿಗೆ ನೆಲೆ. ಅಪರೂಪದ ಪ್ರಾಣಿಗಳನ್ನು ಸಂರಕ್ಷಣೆ ಮತ್ತು ಸಂತಾನೋತ್ಪತ್ತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅಂಬಾವಿಲಾಸ ಅರಮನೆಯ ನಂತರ ಮೈಸೂರಿನಲ್ಲಿ ಹೆಚ್ಚು ಭೇಟಿ ನೀಡುವ 2ನೇ ತಾಣವಾಗಿದೆ. ಮಕ್ಕಳಿಗೆ ಪ್ರಿಯವಾದ ಸ್ಥಳವೂ ಹೌದು. ಇಲ್ಲಿನ ನಿರ್ವಹಣೆಯಂತಹ ಅತ್ಯಂತ ಸವಾಲಿನ ಹಾಗೂ ಮಹತ್ವದ ಜವಾಬ್ದಾರಿಯನ್ನು ಅನುಷಾ ನಿರ್ವಹಿಸುತ್ತಿದ್ದಾರೆ.

**ಪ್ರಸ್ತುತ ಇವರೊಬ್ಬರೆ:** ಈ ಝೂ ಈವರೆಗೆ 22 ಕಾರ್ಯನಿರ್ವಾಹಕ ನಿರ್ದೇಶಕರನ್ನು (ಇಡಿ) ಕಂಡಿದೆ. ಇವರಲ್ಲಿ ಕಮಲಾ ಅವರು 2016ರಿಂದ 2017ರವರೆಗೆ ಕೆಲಸ ಮಾಡಿ, ಇ.ಡಿ.ಯಾದ ಮೊದಲ ಮಹಿಳಾ ಅಧಿಕಾರಿ ಎನಿಸಿದ್ದರು. ಇದಾದ ಬಳಿ, ಅನುಷಾ ಇ.ಡಿ.ಯಾಗಿ ನೇಮಕಗೊಂಡಿರುವ 2ನೇ ಮಹಿಳಾ ಅಧಿಕಾರಿಯಾಗಿದ್ದಾರೆ. ಸದ್ಯ, ರಾಜ್ಯದಲ್ಲಿರುವ ಮೃಗಾಲಯಗಳ ಪೈಕಿ ಕಾರ್ಯನಿರ್ವಾಹಕ ನಿರ್ದೇಶಕರ ಹುದ್ದೆ ನಿಭಾಯಿಸುತ್ತಿರುವ ಏಕೈಕ ಮಹಿಳಾ ಅಧಿಕಾರಿ ಇವರು.

**ಚಳ್ಳಕೆರೆಯ ಪ್ರತಿಭೆ:** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯವರಾದ ಅನುಷಾ, ಅರಣ್ಯಕ್ಕೆ ಸಂಬಂಧಿಸಿದ ಕೆಲಸಕ್ಕೆ ಸೇರಬೇಕು ಎಂದುಕೊಂಡಿದ್ದಕ್ಕೆ ಕನ್ನಡದ ಪ್ರಮುಖ ಕಾದಂಬರಿಕಾರ, ಪರಿಸರವಾದಿಯೂ ಆಗಿದ್ದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿಗಳು ಕಾರಣವಾದವು.

ಚಿತ್ರದುರ್ಗದ ನವೋದಯ ಶಾಲೆಯಲ್ಲಿ ಓದುತ್ತಿದ್ದಾಗ, ಗ್ರಂಥಾಲಯದಲ್ಲಿ ಸಿಕ್ಕ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್' ಮತ್ತು 'ಹೆಜ್ಜೆ ಮೂಡದ ಹಾದಿ' ಕೃತಿಗಳಿಂದ ಆಕರ್ಷಿತರಾದರು. ಒಂದೊಂದೇ ಕೃತಿಗಳನ್ನು ಓದುತ್ತಾ ಹೋದ ಅವರಿಗೆ ಅರಣ್ಯಕ್ಕೆ ಸಂಬಂಧಿಸಿದ ವೃತ್ತಿಗೇ ಸೇರಬೇಕೆಂಬ ಧ್ಯೇಯ ಗಟ್ಟಿಯಾಯಿತು. ಅಲ್ಲದೆ, ನವೋದಯ ಶಾಲೆ ಇದ್ದ 'ಹಸಿರು ಪರಿಸರ'ವೂ ಅವರನ್ನು ಪ್ರಭಾವಿಸಿತು.

ಬಯಲುಸೀಮೆ, ಮಳೆ ಕಡಿಮೆ ಬೀಳುವ ಪ್ರದೇಶವಾದ ಚಳ್ಳಕೆರೆಯ ಅವರನ್ನು ಶಿರಸಿಯ ಅರಣ್ಯ ಕಾಲೇಜಿನ ಪರಿಸರ ಮತ್ತಷ್ಟು ಪ್ರೇರೇಪಿಸಿತು. ಬಿಎಸ್ಸಿ ಫಾರೆಸ್ಟ್ರಿ ಕೋರ್ಸ್‌ಗೆ ಸೇರಿದಾಗ, 'ಇದರಲ್ಲಿ ಉದ್ಯೋಗದ ಅವಕಾಶಗಳು ಅಷ್ಟೇನಿಲ್ಲ' ಎಂದು ಕೆಲವರು ಹೇಳಿದ್ದರಂತೆ. ಆದರೆ, ಗುರಿ ಸ್ಪಷ್ಟವಿದ್ದ ಅನುಷಾ ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳಲಿಲ್ಲ. ವ್ಯಾಸಂಗದಲ್ಲಿ ನಿರತರಾದರು.

**ಪರೀಕ್ಷೆಯಲ್ಲಿ ಪಾಸು:** ಆ ಕೋರ್ಸ್ ಮುಗಿಯುತ್ತಿದ್ದಂತೆಯೇ 2017ರಲ್ಲಿ ಆರ್‌ಎಫ್‌ಒ ಆಗಿ ಉತ್ತರಾಖಂಡದಲ್ಲಿ ತರಬೇತಿ ಪಡೆಯುತ್ತಿದ್ದಾಗಲೇ ಎಸಿಎಫ್ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದರು.

2018ರಿಂದ 20ರವರೆಗೆ ಕೊಯಮತ್ತೂರಿನಲ್ಲಿ ತರಬೇತಿ ಪಡೆದು 2020–21ರಿಂದ ಮೈಸೂರು ವೃತ್ತದಲ್ಲಿ ಪ್ರೊಬೇಷನರಿ ಪೂರ್ಣಗೊಳಿಸಿದರು. ಹುಣಸೂರಿನಲ್ಲಿ ಎರಡು ವರ್ಷ, ನಾಗರಹೊಳೆಯಲ್ಲಿ ಒಂದು ವರ್ಷ, ಮಡಿಕೇರಿಯ ಆನೆ ಕಾರ್ಯಪಡೆಯಲ್ಲಿ, ಬಳಿಕ ಬೆಂಗಳೂರನ್ನು ಕೇಂದ್ರ ಸ್ಥಾನವನ್ನಾಗಿ ಹೊಂದಿರುವ ಜಂಗಲ್ ಲಾಡ್ಜಸ್ ರೆಸಾರ್ಟ್ಸ್ (ಜೆಎಲ್‌ಆರ್)ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿದ್ದರು. ಈಗ, ಮೈಸೂರು ಝೂ ಸಾರಥ್ಯ ವಹಿಸಿದ್ದಾರೆ.

**ನವೋದಯ ಶಾಲೆಯಲ್ಲಿ:** ತೇಜಸ್ವಿ ಕಾದಂಬರಿಗಳ ಪ್ರೇರಣೆಯಲ್ಲಿ ಸಾಗಿದ ಇವರಿಗೆ, 7ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾಗ ಪುಸ್ತಕಗಳನ್ನು ಓದುವುದಕ್ಕೆ ಆರಂಭಿಸಿದ ದಿನಗಳಲ್ಲಿ ಇವರು ರಾಷ್ಟ್ರಕವಿ ಕುವೆಂಪು ಅವರ ಮಗ ಎನ್ನುವುದು ತಿಳಿದಿರಲಿಲ್ಲವಂತೆ. ಅಕಸ್ಮಾತ್ ಆ ಪುಸ್ತಕ ಕೈಗೆತ್ತಿಕೊಂಡಿದ್ದರು. ತೇಜಸ್ವಿ ಬಗ್ಗೆ ತಿಳಿದ ಬಳಿಕ ಮತ್ತಷ್ಟು ಕಾದಂಬರಿಗಳನ್ನು ಓದಿಕೊಂಡರು. ವನ್ಯಲೋಕದ ಕಡೆಗಿನ ಕಾಳಜಿ ಹೆಚ್ಚಿಸಿಕೊಂಡರು. ನವೋದಯ ಶಾಲೆಗೆ ಸೇರಿದ್ದು, ಅರಣ್ಯ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದ ಜೀವನದಲ್ಲಿ ಸಕಾರಾತ್ಮಕವಾದ ತಿರುವು ತಂದುಕೊಟ್ಟವು. ತನ್ನ ಓರಗೆಯ ಇತರರಿಗಿಂತ ಭಿನ್ನವಾಗಿ ಯೋಚಿಸಿದ ಅವರು ಸರ್ಕಾರಿ ಅಧಿಕಾರಿಯಾಗಿ ಜೀವನ ರೂಪಿಸಿಕೊಂಡಿದ್ದಾರೆ.

'ಮೃಗಾಲಯದಲ್ಲಿ ಪ್ರಾಣಿಗಳು ಹಾಗೂ ಸಿಬ್ಬಂದಿ ನಿರ್ವಹಣೆಯೇ ಪ್ರಮುಖ ಕೆಲಸ. ನಿಗಾ ವಹಿಸಬೇಕು. ಆಗಾಗ, ಭೇಟಿ ಕೊಟ್ಟು ಪರಿಶೀಲಿಸುತ್ತಿರಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು. ಇದೆಲ್ಲವನ್ನೂ ಸಮರ್ಪಕವಾಗಿ ನಡೆಸಿಕೊಂಡು ಹೋಗಲು ಆದ್ಯತೆ ನೀಡುತ್ತಿದ್ದೇನೆ' ಎನ್ನುತ್ತಾರೆ ಅವರು.

ಅನುಷಾ ಅವರಿಗೆ ವೃತ್ತಿ ಜೀವನದಲ್ಲಿ 'ಐಎಫ್‌ಎಸ್' ಅಧಿಕಾರಿಯಾಗುವ ಅವಕಾಶವಿದೆ. ಎಲ್ಲರೂ ನಡೆದ ಹಾದಿ ಸವೆಸುವ ಬದಲಿಗೆ, ಸವಾಲುಗಳಿಗೆ ಸಜ್ಜಾಗುತ್ತಲೇ ತಮ್ಮದೇ 'ಪಥ'ವನ್ನು ಸೃಷ್ಟಿಸಿಕೊಂಡು ಮುನ್ನಡೆಯುವವರಿಗೆ ಅನುಷಾ ಅವರಂತಹ ಪ್ರತಿಭೆಗಳು ಮಾದರಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65